'ಹರಿದ ಸ್ಕರ್ಟಿನ ಹುಡುಗಿ', 'ಕಡಲು ಕಳೆದಿದೆ', 'ನೀನುಂಟು ನಿನ್ನ ರೆಕ್ಕೆಗಳುಂಟು' ಕವನ ಸಂಕಲನಗಳ ಮಾಧವಿ ಭಂಡಾರಿ ಸೂಕ್ಷ್ಮ ಸಂವೇದನೆಯ ಕಥೆಗಾರ್ತಿಯಾಗಿ ಸಹೃದಯರ ಗಮನಸೆಳೆದವರು. ಹೊನ್ನಾವರದ ಕೆರೆಕೋಣ ಅವರ ಹುಟ್ಟೂರು.

ಕೂತರೆ ಆಗ್ತಿಲ್ಲೆ ಮಾಣಿ. ತೊಂದ್ರೆ ಎಂತದು ಹೇಳವು. ಪರಾಮರ್ಶಿಲ್ಲದೆ ನ್ಯಾಯಾತೀರ್ಮಾನ ಕೊಡಲಾಗ್ತನ? ಯಂಗೊ ಮತ್ತೆ ಈ ಕಾರಣಕ್ಕಾಗಿ ಮನೆಗೆ ಬತ್ತ್ವಿಲ್ಲೆ. ಎಂತಾ ಯಂಗ್ಳ ಮಾತಿಗೆ ಕಿಮ್ಮತ್ತಿಲ್ಯನ ಹಂಗಾರೆ.'

ಹೀಗೆ ಹೊರಗಿನ ಮಾತುಕತೆ ಸಾಗುತ್ತಿದ್ದರೆ ಒಳಗೆ ಕಲಾವತಿ ತೊಳೆದು ತಂದ ಪಾತ್ರೆಗಳನ್ನೆಲ್ಲ ಕವುಚಿ ಅಡಿಗೆ ಕಟ್ಟೆಯ ಕೆಳಗಿನ ಕಪಾಟಿನಲ್ಲಿ ಜೋಡಿಸಿದಳು. ಅತ್ತೆ ಎಚ್ಚರಿಸುವ ಮೊದಲೇ ಚಹಾಕ್ಕೆ ನೀರಿಟ್ಟು ಬೆರೆಸಿದಳು. ಬಾಳೆ ಎಲೆಯ ಚೂರನ್ನು ಒರೆಸಿಟ್ಟು ಎಲ್ಲರಿಗೂ ತೊಡೆದೇವು ನೀಡಿ ಎಮ್ಮೆ ಹಾಲಿನ ಕಂಪಡರುವ ಗಟ್ಟಿ ಚಹಾವನ್ನು ಎಲ್ಲರೆದುರು ಇರಿಸಿದಳು. ಅದರ ಮೇಲೆ ಅತ್ತೆ ಎರೆದ ತುಪ್ಪದಲ್ಲಿ ತೊಡೆದೇವು ಅದ್ದಿ ತಿನ್ನುತ್ತಿದ್ದ ಮಾಬ್ಲಮಾವ,

'ಆಹಾ, ಇಂತಾ ರುಚಿಗಟ್ಟಾದ ಅಡ್ಗೆ ಮಾಡೋ ಹೆಣ್ತಿ ಇದ್ದಿದ್ರೆ ಆನಂತೂ ಪರಮ ಖುಷಿಯಿಂದ ಇದ್ದಬಿಡ್ತಿದ್ದೆ ನೋಡು.' ಎಂದು ಬಾಯಿ ಚಪ್ಪರಿಸುವಷ್ಟರಲ್ಲಿ, 'ಅದಕ್ಕೇ ಅಡ್ಡಿಲ್ಲೆ' ಎಂದ ಸುಬ್ಬಣ್ಣಿಯತ್ತ ತಿರುಗಿ, 'ಮಾಣಿ, ಇಂತಾ ಚಲೋ ಹೆಣ್ತಿದ್ದು, ಗೆಜ್ಜೆ ಕಾಲ್ ಕುಣಿಸ್ತಾ ತೊಟ್ಟಲಲ್ಲಿ ಚಂದ್ರನಂಗೆ ನಗ್ತಿದ್ದ ಮಾಣಿದ್ದ. ಇನ್ನೆಂತ ಬೇಕೋ ಮೂರ್ ದಿನದ ಈ ಬದಕನಲ್ಲಿ?' ಎಂದು ಕೇಳುತ್ತಿದ್ದಂತೆ, 'ಹ್ಞೂ ಹಗಲಿದ್ದಂಗೆ ರಾತ್ರಿರ್ತಿಲ್ಲೆ' ಎಂದು ಎದ್ದು ಹೆಗಲ ಮೇಲೆ ಹೊದ್ದ ಟುವಾಲನ್ನು ಟಕ್‌ನೆ ಕೊಡವಿ ಹೊರಟ ಸುಬ್ಬಣ್ಣಿಯ ಮಾತು ಅರ್ಥವಾಗದೆ ಕಕ್ಕಾಬಿಕ್ಕಿಯಾದರು ಬಂದವರು.

ಕಲಾವತಿಗೆ ತಾನು ಸತ್ತಂತಾಗಿ ತಟ್ಟನೆ ಒಳಕ್ಕೆ ಕಾಲಿಟ್ಟಳು. ನಾಲ್ಕು ಹೆಜ್ಜೆ ಇಟ್ಟವಳಿಗೆ 'ಯನ್ನತ್ರ ಬದಕಲಾಗ್ತಿಲ್ಲೆ ಇನ್ನು' ಎನ್ನುವ ಗಂಡನ ದನಿಯೂ, ಅವನನ್ನು ಸಮಾಧಾನಿಸಿ ಹಿಡಿದು ಕೂಡ್ರಿಸುವ ಧ್ವನಿಯೂ ದೂರದಿಂದೆಂಬಂತೆ ಕೇಳಿ ಬಂತು. ನೇರ ಬಚ್ಚಲ ಮನೆಯನ್ನು ಸೇರಿ ಗೋಡೆಗೆ ಮುಖ ಆನಿಸಿ ಮುಸಿಮುಸಿ ಅತ್ತಳು.

ಮದುವೆಯಾಗುವಾಗಿನ ಹೆಣ್ಣಿನ ಕನಸಿನ ಬದುಕು ಮುಂದೆ ಬೇರೆಯೇ ಆಗಿಬಿಡುವುದರ ಚಿತ್ರ ಮೂಡಿಬಂತು ಕಲಾವತಿಗೆ. ಹುಟ್ಟಿದ ಮನೆಯೂ ದೂರಾಗದು ಬಹುಶಃ ಹೊಕ್ಕಿದ ಮನೆಯೂ ಬೇಸರವಾಗದೆಂಬ ನಂಬಿಕೆಯಿಂದ ಪಕ್ಕದೂರಿನ ಗಂಡನ ಮನೆಯನ್ನು ಪ್ರವೇಶಿಸಿದ್ದಾಯಿತು. ಮಾಲೆ ಹಾಕುವಾಗ ಮೀಸೆಯಲ್ಲೇ ನಗುವ ಬಾಸಿಂಗಧಾರಿ ಗಂಡನ್ನು ಕಂಡು 'ಅಡ್ಡಿಲ್ಲೆ, ಮದ್ವೆ ಮಾಣಿ ಲೈಕ್ ಇದ್ದ' ಎಂದು ಮನದಲ್ಲೇ ಖುಷಿ ಪಟ್ಟಳು. ಕೈಯ ಮೇಲೆ ಕೈ ಇರಿಸಿ ಪುರೋಹಿತರು ಶಾಸ್ತ್ರ ಮಾಡುವಾಗ ರೋಮಾಂಚನಗೊಂಡು ಮೊದಲ ಸ್ಪರ್ಶದ ಕನಸಿಗೆ ಜಾರಿದಳು. ಯಾರದೋ ಮದುವೆಯ ಚಪ್ಪರದಲ್ಲಿ ನನ್ನನ್ನು ನೋಡಿ ನಾನೇ ಆಗಬೇಕೆಂದು ಹಟ ತೊಟ್ಟು ಆದನೆಂದು ಅರಿತಾಗ ಹೋಳಿಗೆ ಜಾರಿ ತುಪ್ಪದಲ್ಲಿ ಬಿದ್ದಷ್ಟು ಹಿಗ್ಗಿ ಹೀರೇಕಾಯಾದಳು. ಎಷ್ಟೇ ಬಚ್ಚಿಟ್ಟರೂ ಒಳಗಿನ ಖುಷಿ ಮುಖಕನ್ನಡಿಯಲ್ಲಿ ಪ್ರತಿಫಲಿಸುತ್ತಿತ್ತು. ಜೀವನದ ಪರಮಾಪ್ತ ಸುಖಕ್ಕಾಗಿ ಹಂಬಲಿಸಿ ಒಳ ಅಡಿ ಇಟ್ಟಾಗ ಯಾಕೋ ರಾತ್ರಿ ತಾನಂದುಕೊಂಡಷ್ಟು ಸುಖವಾಗಿರಲಿಲ್ಲವೆನಿಸಿತು. ಆದರೇನು ಎಲ್ಲ ಹೆಣ್ಣು ಮಕ್ಕಳ ಪಾಡೂ ಹೀಗೇ ಇರಬೇಕೆಂದು ಏನೂ ನಡೆಯದವಳಂತೆ ಇದ್ದು ಬಿಟ್ಟಳು.

ಊರಲ್ಲಿ ಆಲೆಮನೆ ಶುರುವಾಯಿತೆಂದರೆ ಇವರ ಮನೆಯ ತೊಡೆದೇವಿನ ಗಡಿಗೆಗೆ ಎಲ್ಲಿಲ್ಲದ ಕೆಲಸ. ಬೆಂಕಿ ಆರುವುದೇ ಅಪರೂಪವೆನ್ನುವಂತಾಯಿತು. ಗರಿಗರಿಯಾದ ತೊಡೆದೇವನ್ನು ಮುರಿದು ಬಾಯಲ್ಲಿಡುವಾಗಿನ ಗಂಡನ ಮುಖಭಾವವನ್ನು ನೋಡಿದಾಗ ಬದುಕು ತೃಪ್ತವೆಂದೆನಿಸಿತ್ತು.

ಮಗ್ಗುಲಲ್ಲಿ ಬಿದ್ದರೆ ಬಸಿರೋ ಎನ್ನುವ ಹಾಗೆ ಹೆಣ್ತನದ ಮಹತ್ವದ ಘಟ್ಟವನ್ನೂ ಹಾದು, ಗಂಡು ಮಾಣಿಯನ್ನೇ ಎತ್ತಾಡಿಸುವ ಅವರೆಲ್ಲರ ಮನದಾಸೆಯೂ ಕೈಗೂಡಿದಾಗ ತನ್ನ ನಿಟ್ಟುಸಿರ ಬಚ್ಚಿಟ್ಟು ಮನೆಯವರ ಸಂತೋಷವೇ ತನ್ನದೆಂದು ನಿರಾಳಾದಳು. ಆದರೂ, ಬರಬರುತ್ತ ಎಷ್ಟೇ ಗರಿಗರಿಯಾದ ಕೆಂಪಗೆ ಬೆಂದ